KAMD720002572017

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಶ್ರೀರಂಗಪಟ್ಟಣ

**ಸಿ.ಸಿ.ನಂಃ111/2017**

ದಿನಾಂಕಃ **27.07.2026**

**ಫಿರ್ಯಾದು** ಃ ಅರಕೆರೆ ಪೋಲೀಸ್ ಠಾಣೆ

**ಃ ವಿ ರು ದ್ಧ ಃ**

**ಆರೋಪಿ**ತರು ಃ ರಾಜೇಶ್ ಅಲಿಯಾಸ್ ಕಪ್ಪೆ ಮತ್ತು ಒಬ್ಬರು

ಕಲಂಃ **504, 323, 324** ಮತ್ತು **506** ಸಹವಾಚಕ **34** ರ ಐ.ಪಿ.ಸಿ.

ಃಃ ದೋಷಾರೋಪಣೆ ಃಃ

ನಾನು ಉಮೇಶ.ಎಮ್.ಪಿ., ಬಿ.ಎ.ಎಲ್., ಎಲ್.ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಶ್ರೀರಂಗಪಟ್ಟಣ.

ಈ ಮೂಲಕ ಆರೋಪೀತರಾದ

| | |
|---|---|
| ಆರೋಪಿಃ1 | ರಾಜೇಶ್ ಅಲಿಯಾಸ್ ಕಪ್ಪೆ<br>ಬಿನ್ ಲೇಟ್ ನಾಗಪ್ಪ<br>ವಯಸ್ಸು **27** ವರ್ಷಗಳು, |
| ಆರೋಪಿಃ2 | ಸಿದ್ದರಾಜು ಬಿನ್ ಲೇಟ್ ಮರಿಶೆಟ್ಟಿ<br>ವಯಸ್ಸು **48** ವರ್ಷಗಳು,<br>ಇಬ್ಬರೂ ವಾಸಃ ಹುರುಳಿಕ್ಯಾತನಹಳ್ಳಿ ಗ್ರಾಮ,<br>ಕಸಬಾ ಹೋಬಳಿ, ಶ್ರೀರಂಗಪಟ್ಟಣ ತಾಲೂಕು,<br>ಮಂಡ್ಯ ಜಿಲ್ಲೆ. |

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ ಃ-

**1.** ಮೊದಲನೇಯದಾಗಿ ದಿನಾಂಕಃ14.01.2017 ರಂದು ಮದಾಹ್ನ 12-00 ಗಂಟೆ ಸಮಯದಲ್ಲಿ ಅರಕೆರೆ ಪೋಲೀಸ್ ಠಾಣೆಯ ಸರಹದ್ದಿಗೆ ಸೇರಿದ ಹುರುಳಿಕ್ಯಾತನಹಳ್ಳಿ ಗ್ರಾಮದ ಅಯ್ಯಪ್ಪಸ್ವಾಮಿ ದೇವಸ್ಥಾನದ ಬಳಿ ದೋ.ಸಾಕ್ಷಿ-1 ಶಿವಣ್ಣರವರು ಕುಳಿತ್ತಿದ್ದ ಸಮಯದಲ್ಲಿ 1ನೇ ಮತ್ತು 2ನೇ ಆರೋಪಿತರಾದ ನೀವು ದೋ.ಸಾಕ್ಷಿ-1 ಶಿವಣ್ಣರವರೊಡನೆ ಜಗಳ ಮಾಡುವ ಸಮಾನ ಉದ್ದೇಶದಿಂದ ಅಲ್ಲಿಗೆ ಬಂದು ಏಕಾಏಕಿ 2ನೇ ಆರೋಪಿಯಾದ ನೀವು ತನಗೆ ನೀನು ನಿನ್ನ ಹುಲು ತುಂಬುವ ಕೂಲಿ ಕೆಲಸಕ್ಕೆ ಕರೆದುಕೊಂಡು ಹೋಗಿ ಕೂಲಿ ಕೆಲಸದ ಹಣ ಕೊಡಿಸಲಿಲ್ಲ ಎಂದು ದೋ.ಸಾಕ್ಷಿ-1 ಶಿವಣ್ಣ ರವರೊಡನೆ ಜಗಳ ತೆಗೆದು ಬೋಳಿಮಗನೆ ಎಂದು ಹಾಗೂ 1ನೇ ಆರೋಪಿಯಾದ ನೀವು ದೋ.ಸಾಕ್ಷಿ-1 ಶಿವಣ್ಣ ರವರಿಗೆ ಬೋಳಿಮಗ ಕೂಲಿಗೆ ಕರೆದುಕೊಂಡು ಹೋದರೆ ಹಣ ಕೊಡಿಸಲು ಹಿಂದೆ ಮುಂದೆ ನೋಡುತ್ತಾನೆ ಎಂದು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು ಇರುತ್ತದೆ. ಆ ಮೂಲಕ ದೂರುದಾರರಿಗೆ ಉದ್ರೇಕವನ್ನುಂಟು ಮಾಡಿ ಆ ಉದ್ರೇಕದಿಂದ ದೂರುದಾರರಿಗೆ ಶಾಂತಿಭಂಗವನ್ನುಂಟು ಮಾಡಲೆಂಬ ಅಥವಾ ಇತರ ಯಾವುದೇ ಅಪರಾಧವನ್ನುಂಟು ಮಾಡಲೆಂಬ ಉದ್ದೇಶದಿಂದ ಅಪಮಾನ ಮಾಡಿದ್ದು ಇರುತ್ತದೆ. ಈ

KAMD720002572017

ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ.ಕಲಂ.**504** ಸಹವಾಚಕ ಕಲಂ **34** ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ ಎಂದೂ,

**2.** ಎರಡನೇಯದಾಗಿ ಅದೇ ದಿನಾಂಕ, ಅದೇ ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಜಗಳ ತೆಗೆದು, 2 ನೇ ಆರೋಪಿಯಾದ ನೀವು ಕೈಯಿಂದ ದೋ.ಸಾಕ್ಷಿ-1 ಶಿವಣ್ಣ ರವರ ತಲೆ ಮತ್ತು ಮೈ ಮೇಲೆ ಹೊಡೆದ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.**323** ಸಹವಾಚಕ ಕಲಂ **34** ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ ಎಂದೂ,

**3.** ಮೂರನೇಯದಾಗಿ ಅದೇ ದಿನಾಂಕ, ಅದೇ ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಜಗಳ ತೆಗೆದು, 1 ನೇ ಆರೋಪಿಯಾದ ನೀವು ಒಂದು ಕಾಡು ವರದ ದೊಣ್ಣೆಯಿಂದ ದೋ.ಸಾಕ್ಷಿ-1 ಶಿವಣ್ಣ ರವರ ತಲೆಯ ಬಲಭಾಗಕ್ಕೆ ಹೊಡೆದು ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.**324** ಸಹವಾಚಕ ಕಲಂ **34** ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ ಎಂದೂ,

**4.** ಕೊನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಜಗಳ ತೆಗೆದು, 1 ನೇ ಆರೋಪಿಯಾದ ನೀವು ದೋ.ಸಾಕ್ಷಿ-1 ಶಿವಣ್ಣ ರವರಿಗೆ ಕೊಲೆಮಾಡುವುದಾಗಿ ಕೊಲೆ ಬೆದರಿಕೆ ಹಾಕಿರುತ್ತೀರಿ. ಈ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ.ಕಲಂ.**506** ಸಹವಾಚಕ **34** ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ ಎಂದೂ, ನಿಮ್ಮ ಮೇಲೆ ಆರೋಪ ಇದೆ.

(ಮೇಲಿನ ಆಪಾದನೆಯನ್ನು ಆರೋಪಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ದಾಖಲಿಸಿ ಸರಿ ಇದೆ ಎಂದು ಧೃಡೀಕರಿಸುತ್ತೇನೆ).

(ಉಮೇಶ.ಎಮ್.ಪಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ, ಶ್ರೀರಂಗಪಟ್ಟಣ.

KAMD720002572017

# ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಶ್ರೀರಂಗಪಟ್ಟಣ

**ಸಿ.ಸಿ.ನಂಃ111/2017**

ದಿನಾಂಕಃ **27.07.2026**

**ಫಿರ್ಯಾದು** ಃ ಅರಕೆರೆ ಪೋಲೀಸ್ ಠಾಣೆ

**ಃ ವಿ ರು ದ್ಧ ಃ**

ಆರೋಪಿ -1 ಃ ರಾಜೇಶ್ ಅಲಿಯಾಸ್ ಕಪ್ಪೆ
ಬಿನ್ ಲೇಟ್ ನಾಗಪ್ಪ

ಃಃಆರೋಪಿ ಹೇಳಿಕೆಃಃ

ಪ್ರಃ- ದೋಷಾರೋಪಣೆಯನ್ನು ಕನ್ನಡದಲ್ಲಿ ಓದಿ ಹೇಳಲಾಗಿದ್ದು ಅರ್ಥವಾಯಿತಾ?

ಉಃ-

ಪ್ರಃ- ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯಾಗಬೇಕೆ?

ಉಃ-

(ಮೇಲ್ಕಂಡ ದೋಷಾರೋಪಣೆಯನ್ನುಆರೋಪಿತರಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರುಗಳು ನೀಡಿದ ಉತ್ತರವನ್ನು ಯಥವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು ಎಂದು ಈ ಮೂಲಕ ದೃಢೀಕರಿಸಲಾಗಿದೆ)

(ಉಮೇಶ.ಎಮ್.ಪಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ, ಶ್ರೀರಂಗಪಟ್ಟಣ.

ಆರೋಪಿತನ ಸಹಿಃ

KAMD720002572017